Mysore Appropriation (No. 5 and No. 6) Bills, 1969

Introduction

Sri RAMAKRISHNA HEGDE (Minister for Finance, Planning and Youth Welfare).—I beg to introduce :

"(1) The Mysore Appropriation (No. 5) Bill, 1969, and

"(2) The Mysore Appropriation (No. 6) Bill, 1969."

Mr. SPEAKER.—The Bills are introduced.

Mysore Silkworm Seed and Cocoon (Regulation of Production, Supplies and Distribution) (Amendment) Bill, 1969.

Introduction

Sri B. RACHAIAH (Minister for Agriculture).—Sir, I beg to introduce :

"The Mysore Silkworm Seed and Cocoon (Regulation of Production, Supply and Distribution) (Amendment) Bills, 1969."

Mr. SPEAKER.—The Bill is introduced.

Mysore Weights and Measures (Enforcement) (Amendement) Bill, 1969

Introduced

Sri B. L. GOWDA (Deputy Minister for Co-operation).—Sir, on behalf of the Minister for Development. I beg to introduce :

"The Mysore Weights and Measures (Enforcement) (Amendment) Bill, 1969."

Mr. SPEAKER.—The Bill is introduced.

Mr. SPEAKER.—Next item, Bills for consideration and passing.....

Sri M. NAGAPPA.—I rise to a point of order. My point of order is in regard to the Bills that are introduced just now.

Mr. SPEAKER.—What is the point of order ?

3-00 P.M.

† ಶ್ರೀ ಎಂ. ನಾಗಪ್ಪ.—ಸ್ವಾಮಿ, ರೂಲು 27 ನ್ನು ತಾವು ದಯವಿಟ್ಟು ನೋಡಬೇಕು ಅದು ಈ ರೀತಿ ಇದೆ :

"On days allotted for the transaction of Government

business such business shall have precedence and the Secretary shall arrange that business in such order as the Speaker may, in consultation with the Leader of the House determine :

Provided that such order of business shall not be varied on the day that business is set down for disposal unless the Speaker is satisfied that there is sufficient ground for such variation."

ಮತ್ತು Rule 31 reads as follows :

I will read Sub-Rule (2) :

"A list of business for the day shall be prepaed by the Secretary, and a copy thereof together with other papers, if any, shall be made available for the use of every member the previous day." ಈ ರೀತಿ ಇದೆ.

ಈಗ ಏನಾಗಿದೆ ಎಂದರೆ ಮುಂಚಿತವಾಗಿಯೇ ನಿಮಗೆ ಬೇಕಾದ ಬಿಲ್ಲನ್ನು ತರುತ್ತೀರಿ. ಅದರ ಕಾಪಿಯನ್ನೂ ಸಹ ನಮಗೆ ಕೊಡುವುದಿಲ್ಲ. ಒಂದು ದಿವಸ ಮುಂಚಿತವಾಗಿಯಾದರೂ ಫೈನಾನ್‌ಷಿಯರ್ ಮೆಮೋರ್ಯಾಂಡಂ ಏನು ಇದೆ ಅದು ಕೂಡ ಕೊಡುವುದಿಲ್ಲ. ಲೆಜಿಸ್ಲೇಚರ್ ಸೆಕ್ರಟೇರಿಯೆಟ್‌ನವರು ಒದಗಿಸಬೇಕಾದ ಕಾಪಿಯನ್ನು ಒದಗಿಸುತ್ತಾ ಇಲ್ಲ. ಇಲ್ಲದೇ ಹೋದರೆ ತಾವು ರೂಲನ್ನು ಸಸ್ಪೆಂಡ್ ಮಾಡಬೇಕು. ಇದಕ್ಕಿಂತ ಮುಂಚೆ ಎರಡು ಬಿಲ್ಲು ಬಂದಿತ್ತು. ಅದರ ಕಾಪಿಯನ್ನು ಕೊಡಲಿಲ್ಲ. ಇದನ್ನು ಸೆಕ್ರಟರಿಯವರ ಗಮನಕ್ಕೆ ತಂದೆ. ಮುಂದಾದರೂ ಈ ಬಿಲ್ಲಿನ ಕಾಪಿಯನ್ನು ಕೊಡಿ. ಸರಿಯಾಗಿ ಇಂಟ್ರೊಡಕ್ಷನ್ ಆಗುತ್ತದೆಯೇ ಇಲ್ಲವೇ ಎನ್ನುವುದನ್ನು ನೋಡಬೇಕು. ಈಗ ಶ್ರೀಮಾನ್ ಪಿ. ಎಂ. ನಾಡಗೌಡರು ಇಂಟ್ರಡ್ಯೂಸ್ ಮಾಡುವ ಬಿಲ್ಲು ಏನು ಇದೆ The Mysore Weights and Measures (Enforcement) (Amendment) Bill, 1969 ಈ ಕಾಪಿಯನ್ನು ಕೊಟ್ಟಿಲ್ಲ. ಮತ್ತು ಅಗ್ರಿಕರ್‌ಚರಿಸ್ಟ್ ಮಿನಿಸ್ಟರ್ ಅವರು ಇಂಟ್ರಡ್ಯೂಸ್ ಮಾಡತಕ್ಕಂಥ ಬಿಲ್ಲು ಏನು ಇದೆ The Mysore Silkworm Seed and Cocoon (Regulation of Production, Supply and Distribution) (Amendment) Bill, 1969 ಇದರ ಕಾಪಿಯನ್ನೂ ಕೊಟ್ಟಿಲ್ಲ. ತಾವು ದಯವಿಟ್ಟು ಇದರಲ್ಲಿ ತರಕೂಡದು. ಇಂತಹ ಅಬ್ಜೆಕ್ಷನ್ ಇದ್ದರೆ ರೂಲು ಸಸ್ಪೆಂಡ್ ಮಾಡಲು ಪವರ್ ಇದೆ. ಈಗ ಕಾಯಿದೆ ಮಂತ್ರಿಗಳು ಏನು ಮಾಡುತ್ತಿದ್ದಾರೆ ಎಂದು ಕೇಳುತ್ತೇನೆ. ಹಿಂದೆ ಬೆಂಗಳೂರು ಕಾರ್ಪೊರೇಷನ್ ಅಮೆಂಡ್‌ಮೆಂಟ್ ಬಿಲ್ ತಂದಾಗ ಮುಂದಕ್ಕೆ ಹಾಕಿ, ಗವರ್ನರ ಹತ್ತಿರ ಸೈನ್ ಹಾಕಿಸಿಕೊಂಡು ಇಂಟ್ರಡ್ಯೂಸ್ ಮಾಡಿದರು. ಮುಂದೆ ಇಂಥಾದ್ದಕ್ಕೆ ಅವಕಾಶ ಕೊಡದೆ ಮೊದಲೇ ಬಿಲ್ ಕಾಪಿಯನ್ನು ಒದಗಿಸಿಕೊಡಬೇಕೆಂದು ಹೇಳುತ್ತೇನೆ.

Mr. SPEAKER.—The Hon. Member has made out a good point. Rules will be strictly followed.

Mysore Irrigation (Levy of Betterment Contribution and Water Rate) (Amendment) Bill, 1969.

Motion to consider—Debate Continued

(MR. DEPUTY SPEAKER in the Chair)

†ಶ್ರೀ ಎರ್. ಶ್ರೀಕಂಠಯ್ಯ (ನಂಜನಗೂಡು).—ಮಾನ್ಯ ಅಧ್ಯಕ್ಷರೇ, ನಿನ್ನೆ ದಿವಸ ಶ್ರೀಮಾನ್ ಪುಟ್ಟಸ್ವಾಮಿಯವರು ಈಪೊತ್ತಿನ ದಿವಸ ಸರ್ಕಾರಕ್ಕೆ ಹಣ ಇಲ್ಲ, ನಾವು ಯೋಜನೆಯನ್ನು ಕೈಗೊಳ್ಳಬೇಕಾಗಿದೆ, ಸಾರ್ವಜನಿಕರ ಹತ್ತಿರಕ್ಕೆ ಹೋಗಿ ಹಣವನ್ನು ಕೇಳಬೇಕಾದ ಪರಿಸ್ಥಿತಿಗೆ